

# ಮೊಬೈಲ್ ಸ್ಲಿಂಗ್ ಪೌಚ್ ತಯಾರಿಸಿ

ಇದೊಂದು ಸುಲಭವಾಗಿ ಅನುಕರಣೆ ಮಾಡಬಹುದಾದ ವಿಡಿಯೋ. ಇದರಲ್ಲಿ ನೀವು ನಿಮ್ಮ ಮೊಬೈಲ್ ಫೋನಿಗೆ ಸ್ಲಿಂಗ್ ಪೌಚ್ ಮಾಡುವುದನ್ನು ಕಲಿಯುತ್ತೀರಿ. ನನ್ನ ಜೊತೆಗೇ ನೀವೂ ಸಹಾ ಅಭ್ಯಾಸ ಮಾಡಬಹುದಲ್ಲವೆ



ಇದನ್ನು ಶುರು ಮಾಡಲು ನಿಮಗೆ ಬೇಕಾಗಿರುವ ವಸ್ತುಗಳೆಂದರೆ

– 9 ಇಂಚು ಅಗಲ, 13 ಇಂಚು ಉದ್ದದ ಒಂದು ಬಟ್ಟೆ ತುಂಡು
– ನಿಮ್ಮ ಸೆಲ್ ಫೋನ್‌ಗಿಂತ ಕನಿಷ್ಠ 3 ಇಂಚು ದೊಡ್ಡದಾಗಿರುವ ಒಂದೇ ಅಳತೆಯ ಮೂರು ಬಟ್ಟೆ ತುಂಡುಗಳು. ಅದರಲ್ಲಿ ಒಂದು ಸರಿಹೊಂದಿಸಿದ ಮುದ್ರಿತ ಬಟ್ಟೆ ಇರಲಿ.
– ಅಲಂಕಾರಕ್ಕೆ ಬೇಕಾದಂತಹ ಒಂದು ಬಟನ್
– ವೇಗವರ್ಧಕವಾಗಿ ಬಳಸುವ ಒಂದು ಇಂಚು ಉದ್ದದ ವೆಲ್ಕ್ರೋ ಪೀಸ್
– ಒಂದು ಉದ್ದನೆಯ ರಿಬ್ಬನ್

ಮೂರು ಒಂದೇ ಗಾತ್ರದ ಬಟ್ಟೆ ತುಂಡುಗಳನ್ನು ತೆಗೆದುಕೊಳ್ಳಿ ಮತ್ತು ಅವುಗಳನ್ನು ಒಂದರ ಮೇಲೆ ಒಂದರಂತೆ ಪ್ರಿಂಟೆಡ್ ಬಟ್ಟೆಯು ಎರಡು ಗಟ್ಟಿ ಬಟ್ಟೆಯ ಮೇಲೆ ಬರುವ ಹಾಗೆ ಇಡಿ. ಮುದ್ರಿತ ಬಟ್ಟೆಯ ಸರಿಯಾದ ಭಾಗ ಮತ್ತು ಮೇಲಿರುವ ಗಟ್ಟಿ ಬಟ್ಟೆಯು ವಿಡಿಯೋದಲ್ಲಿ ತೋರಿಸುವಂತೆ ಒಂದಕ್ಕೊಂದು ಮುಖಮಾಡಿವೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಬಟ್ಟೆಯ ಪದರಗಳೆಲ್ಲವೂ ಒಟ್ಟಿಗೇ ಇರುವಂತೆ ಮಣಿಪಿನ್ನುಗಳಿಂದ ಭದ್ರಪಡಿಸಿ.

ಈಗ ಬಟ್ಟೆಯನ್ನು ಹೊಲಿಗೆ ಯಂತ್ರದ ಕಡೆಗೆ ಒಯ್ಯಿರಿ. ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ನಾಬ್‌ನ್ನು 'ಎ'ಗೆ ಸೆಟ್ ಮಾಡಿ ಮತ್ತು ಸ್ಟಿಚ್ ಲೆಂಗ್ತ್‌ನ್ನು 2 ಮತ್ತು 3ರ ನಡುವೆ ಇರುವಂತೆ ಸೆಟ್ ಮಾಡಿ.

ಬಟ್ಟೆಯ ಪಿನ್ ಹಾಕಿರುವ ಬದಿಯನ್ನು ಪ್ರೆಷರ್ ಫುಟ್‌ಗೆ ಸರಿಯಾಗಿ ಹೊಂದಿಸಿ ಇಡಿ. ಪ್ರೆಷರ್ ಫುಟ್ ಕೆಳಕ್ಕೆ ಮಾಡಿ ಹೊಲಿಯಲು ಪ್ರಾರಂಭಿಸಿ. ಹೊಲಿಯುತ್ತಾ ಹೋದಂತೆ ಪಿನ್ನುಗಳನ್ನು ತೆಗೆಯುವುದನ್ನು ಮರೆಯಬೇಡಿ. ಮತ್ತೊಂದು ತುದಿಗೆ ಬಂದಾಗ ಕೆಲವು ಹೊಲಿಗೆಗಳನ್ನು ಹಿಮ್ಮುಖವಾಗಿ ಹಾಕಲು ಅನುಕೂಲವಾಗುವಂತೆ ರಿವರ್ಸ್ ಸ್ಟಿಚ್ ಸೆಲೆಕ್ಟರ್‌ನ್ನು ಒತ್ತಿ, ರಿಲೀಸ್ ಮಾಡಿ ನಂತರ ಮತ್ತೊಂದು ತುದಿಯವರೆಗೂ ಹೊಲಿಗೆಯನ್ನು ಮುಂದುವರಿಸಿ.



ಪ್ರೆಷರ್ ಫುಟ್ ಮೇಲಕ್ಕೆ ಮಾಡಿ ಬಟ್ಟೆಯನ್ನು ಹೊರಕ್ಕೆ ತೆಗೆಯಿರಿ. ದಾರವನ್ನು ಕತ್ತರಿಸಿ.

ಈಗ ನೀವು ಬಟ್ಟೆಯ ಸರಿಯಾದ ಭಾಗವನ್ನು ಹೊಲಿದಿದ್ದೀರಿ. ಗಟ್ಟಿ ಹಾಗೂ ಪ್ರಿಂಟೆಡ್ ಬಟ್ಟೆಗಳೆಲ್ಲವೂ ಪಕ್ಕಪಕ್ಕದಲ್ಲಿ ಬರುವಂತೆ ಬಟ್ಟೆಗಳನ್ನು ಓಪನ್ ಮಾಡಿ. ಅದನ್ನು ಸಮತಟ್ಟಾಗಿ ಇರಿಸಿ. ಎರಡೂ ಭಾಗದಲ್ಲಿರುವ ದಾರಗಳನ್ನು ಸರಿಯಾಗಿ ಕತ್ತರಿಸಿ ಟ್ರಿಮ್ ಮಾಡಿ.

ಈಗ ಹೊಲಿದ ಬಟ್ಟೆಗಳನ್ನು, ಅದರ ಸರಿಯಾದ ಭಾಗಗಳು ಒಂದಕ್ಕೊಂದು ಮುಖ ಮಾಡುವಂತೆ, ದೊಡ್ಡ ಗಾತ್ರದ ಬಟ್ಟೆಯ ಮೇಲಿಡಿ. ನೇರವಾದ ಅಂಚುಗಳನ್ನು ಸರಿಹೊಂದಿಸಿ. ಬಟ್ಟೆ ತುಂಡುಗಳು ಅತ್ತಿತ್ತ ಜರುಗದಂತೆ ಪಿನ್ನುಗಳಿಂದ ಭದ್ರಪಡಿಸಿ.

ರಿವರ್ಸ್ ಸ್ಟಿಚ್ ಸೆಲೆಕ್ಟರ್‌ನಿಂದ ಹೊಲಿಗೆಯನ್ನು ಲಾಕ್ ಮಾಡಿ. ಬಟ್ಟೆಯ ವಿರುದ್ಧ ತುದಿಯವರೆಗೂ ಕೆಳಕ್ಕೆ ನೇರವಾಗಿ ಮುಂದುವರಿಸಿ. ಕೊನೆಯ ತುದಿಯಲ್ಲೂ ಹೊಲಿಗೆಯನ್ನು ಲಾಕ್ ಮಾಡಿ.







ಪ್ರೆಷರ್ ಫುಟ್ ಮೇಲಕ್ಕೆ ಮಾಡಿ ಬಟ್ಟೆಯನ್ನು ಹೊರತೆಗೆಯಿರಿ. ದಾರಕತ್ತರಿಯಿಂದ ದಾರವನ್ನು ಕತ್ತರಿಸಿ. ಹೊಲಿದ ಬಟ್ಟೆಯನ್ನು ಓಪನ್ ಮಾಡಿ, ಅದರ ಫ್ಲಿಟ್ ಮಾಡಿ, ನಂತರ ಉದ್ದಕ್ಕೆ ಮಡಚಿ. ಅದರ ಅಂಚುಗಳು ಸರಿಯಾಗಿ ಇರುವಂತೆ ಹೊಂದಿಸಿ. ಈಗ ಫುಟ್ ಕೆಳಗೆ ಮಾಡಿ ಬಟ್ಟೆಯನ್ನು ಉದ್ದವಾಗಿ ಸೆಟ್ ಮಾಡಿ. ರಿವರ್ಸ್ ಬಟನ್ ಬಳಸಿ ಸ್ಟಿಚ್‌ಗಳನ್ನು ಲಾಕ್ ಮಾಡಿ, ಓಪನ್ ಆಗಿರುವ ಬದಿ ಹೊಲಿಗೆ ಮುಂದುವರಿಸಿ.

ಬಟ್ಟೆಗಳು ಜಾಯಿಂಟ್ ಆಗುವಲ್ಲಿಗೆ ಬಂದಾಗ ಹೊಲಿಗೆ ಯಂತ್ರವನ್ನು ನಿಲ್ಲಿಸಿ. ಕೂಡುಗೆರೆಗಳನ್ನು ಎರಡೂ ಬದಿ ಸರಿಯಾಗಿ ಹೊಂದಿಸಿ ತಿರುವಿನಲ್ಲಿ ಸ್ವಲ್ಪ ಜಾಗ ಬಿಟ್ಟು ಹೊಲಿಗೆ ಮುಂದುವರಿಸಿ.

ನೀವು ಮೂಲೆಯ ತಿರುವಿಗೆ ಬಂದಾಗ ಶೇಪ್ ಅನುಸರಿಸಿ. ತಿರುವಿನಲ್ಲಿ ನಿಧಾನವಾಗಿ ಹೊಲಿಯಿರಿ. ಬಟ್ಟೆಯನ್ನು ತಿರುಗಿಸುವಾಗ ಅವಶ್ಯಕವೆನಿಸಿದರೆ ಪ್ರೆಷರ್ ಫುಟ್ ಮೇಲಕ್ಕೆ ಮಾಡಿ. ಇನ್ನೊಂದು ಬದಿಯಲ್ಲೂ ತಿರುವಿನ ಬಳಿ ಜಾಗ್ರತೆಯಾಗಿ ಹೊಲಿಗೆ ಮುಂದುವರಿಸಿ. ನೀವು ಪ್ರಾರಂಭಿಸಿದ ಜಾಗಕ್ಕೆ ಬರುವವರೆಗೂ ಹೊಲಿಯಿರಿ. ಕೊನೆಯಲ್ಲಿ ರಿವರ್ಸ್ ಸ್ವಿಚ್ ಸೆಲೆಕ್ಟರ್‌ನ್ನು ಕೆಳಕ್ಕೆ ಇಳಿಸಿ ಹೊಲಿಗೆಯನ್ನು ಲಾಕ್ ಮಾಡಿ. ಪ್ರೆಷರ್ ಫುಟ್‌ನ್ನು ಮೇಲಕ್ಕೆ ಮಾಡಿ ಬಟ್ಟೆ ಹೊರತೆಗೆಯಿರಿ. ಉಳಿದಿರುವ ದಾರವನ್ನು ಕತ್ತರಿಸಿ.



ನೀವು ಈಗಾಗಲೇ ಮೂರೂ ಬದಿಗಳನ್ನು ಹೊಲಿದಿದ್ದು, ಇನ್ನೊಂದು ಭಾಗ ಓಪನ್ ಆಗಿಯೇ ಇದೆ. ಫ್ಲಾಪ್‌ಗೆ ಒಂದು ಅಚ್ಚುಕಟ್ಟಾದ ತಿರುವನ್ನು ಕೊಡಲು ತಿರುವಿನ ಸುತ್ತಲೂ ಒಂದೇ ಅಳತೆಯಷ್ಟು ಜಾಗ ಬಿಟ್ಟು ಕಚ್ಚುಗಳನ್ನು ಮಾಡಿರಿ. ಹೊಲಿಗೆಯ ಮೇಲೆ ಕತ್ತರಿ ಬೀಳ‍ದಂತೆ ನೋಡಿಕೊಳ್ಳಿ.

ಈಗ ಓಪನ್ ಇರುವ ಕಡೆಯಿಂದ ಬಟ್ಟೆಯ ಒಳಭಾಗವನ್ನು ಎಚ್ಚರಿಕೆಯಿಂದ ಹೊರಗೆಮಾಡಿ ಮತ್ತು ತಿರುವುಗಳು ಸರಿಯಾಗಿ ಇವೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಇಲ್ಲವೆ ಜಗ್ಗದಂತೆ ಹೊಲಿಗೆ ಸಾಲಿನ ಸುತ್ತಲೂ ಪಿನ್ ಬಳಸಿ ಶೇಪ್ ಅಂದಗೊಳಿಸಿ. ಹೊಲಿಗೆ ಸಾಲು ಒಂದೇ ಸಮತಟ್ಟಾಗಿ ಇರುವಂತೆ ಬಟ್ಟೆಯನ್ನು ಉಜ್ಜಿ ಕ್ರೀಸ್ ಮಾಡಿ. ಸರಿಯಾದ ಶೇಪ್ ಬಂದ ಮೆಲೆ ಮೇಲೆ ಓಪನ್ ಆಗಿರುವ ಭಾಗವನ್ನು ಹಿಡಿದು ಕಚ್ಚಾ ಅಂಚುಗಳನ್ನು ಬಟ್ಟೆಯ ಒಳಗೆ ಅರ್ಧ ಇಂಚಿನಷ್ಟು ಮಡಚಿ.








ಮಡಚಿದ ಭಾಗಗಳನ್ನು ಒಟ್ಟು ಸೇರಿಸಿ ಪ್ರೆಷರ್ ಫುಟ್‌ನ ಕೆಳಗೆ ಇಡಿ. ಮಡಿಕೆಯ ಅಂಚಿನ ಉದ್ದಕ್ಕೂ ಹೊಲಿಯಿರಿ. ಬಟ್ಟೆಯನ್ನು ಹೊರತೆಗೆಯಲು ಫುಟ್ ಮೇಲಕ್ಕೆತ್ತಿ. ಹೆಚ್ಚುವರಿ ದಾರಗಳನ್ನು ಕತ್ತರಿಸಿ ಅಂದಗೊಳಿಸಿ

ಹೊಲಿದಿರುವ ಬಟ್ಟೆಯ ಸರಿಯಲ್ಲದ ಭಾಗವನ್ನು ಸಮತಟ್ಟಾಗಿ ಇಡಿ. ವೆಲ್ಕ್ರೋ ತುಂಡು ತೆಗೆದುಕೊಂಡು ಎರಡು ಬದಿಗಳನ್ನೂ ಬೇರೆ ಬೇರೆ ಮಾಡಿ. ಒರಟಾಗಿರುವ ಭಾಗದಲ್ಲಿ, ಮೂಲೆ ಬದಿಯ ಮಧ್ಯದಲ್ಲಿ, ಮೇಲಿನಿಂದ ಅರ್ಧ ಇಂಚು ಬಿಟ್ಟು, ವೆಲ್ಕ್ರೋ ಇಡಿ.

ಹಾಗೆ ಇಟ್ಟಿರುವ ವೆಲ್‌ಕ್ರೋವನ್ನು ಅಂಚಿನುದ್ದಕ್ಕೂ ಎಲ್ಲಾ ಬದಿಗಳಲ್ಲೂ ಹೊಲಿಯಿರಿ. ಬಾಕ್ಸ್ ಹೊಲಿಗೆ ಹಾಕಿದರೆ ಓಪನ್ ಮಾಡುವಾಗ ಹೆಚ್ಚಿನ ಬಲ ನೀಡುತ್ತದೆ. ಮೂಲೆಗಳಲ್ಲಿ ಹೊಲಿಯುವಾಗ ಸೂಜಿಯನ್ನು ಕೆಳಗೆ ಮಾಡಿ. ಬಟ್ಟೆಯನ್ನು ತಿರುಗಿಸುವಾಗ ಪ್ರೆಷರ್ ಫುಟ್ ಮೇಲಕ್ಕಿರಲಿ. ಇದನ್ನು ಎಲ್ಲಾ ಮೂಲೆಗಳಲ್ಲೂ ಅನುಸರಿಸಿ. ರಿವರ್ಸ್ ಸ್ಟಿಚ್ ಸೆಲೆಕ್ಟರ್ ಉಪಯೋಗಿಸಿ ಹೊಲಿಗೆಯನ್ನು ಭದ್ರಪಡಿಸಿ.

ಇವೆಲ್ಲ ಆದಮೇಲೆ ಪ್ರೆಷರ್ ಫುಟ್ ಮೇಲಕ್ಕೆ ಮಾಡಿ ಬಟ್ಟೆಯನ್ನು ಹೊರತೆಗೆದು ಹೆಚ್ಚುವರಿ ದಾರವನ್ನು ಕತ್ತರಿಸಿ ಅಂದಗೊಳಿಸಿ. ಈಗ ಬಟ್ಟೆಯ ಕೆಳಭಾಗವನ್ನು, ಹೊಲಿಗೆ ಮಾಡಿದ ಅಂಚುಗಳು ಹೊಲಿಗೆಸಾಲನ್ನು ತಲುಪುವಂತೆ ಮಡಚಿ. ಕೆಳಗಿರುವ ಬಟ್ಟೆಯ ಮೇಲಿ ನ ಸರಿಯಾದ ಜಾಗದಲ್ಲಿ ಫ್ಲಾಪ್ ಇಟ್ಟು ಮಡಚಿ. ಅಂಚುಗಳನ್ನು ಗುರುತು ಹಾಕಲು ನೀರಿನಲ್ಲಿ ಅಳಿಸಬಹುದಾದ ವಾಟರ್ ಸಾಲ್ಯುಬಲ್ ಮಾರ್ಕರ್ ಬಳಸಿ.

ಈಗ ವೆಲ್ಕ್ರೋದ ವಿರುದ್ಧ ಭಾಗವನ್ನು ತೆಗೆದುಕೊಂಡು ಗುರುತಿನ ಮೇಲಿಡಿ. ಮಡಿಕೆಯನ್ನು ಓಪನ್ ಮಾಡಿ ಬಟ್ಟೆಯನ್ನು ಹೊಲಿಗೆ ಯಂತ್ರದ ಬಳಿ ತೆಗೆದುಕೊಂಡು ಹೋಗಿ.

ಈ ವೆಲ್ಕ್ರೋ ತುಂಡನ್ನು ಇಟ್ಟು ಅಂಚಿನ ಸುತ್ತಲೂ ಹೊಲಿಗೆ ಹಾಕಿ. ಬಟ್ಟೆಯನ್ನು ಹೊರತೆಗೆದು ಹೆಚ್ಚುವರಿ ದಾರವನ್ನು ಕತ್ತರಿಸಿ ಅಂದಗೊಳಿಸಿ.

ತುಂಡಿನ ಸರಿಯಲ್ಲದ ಭಾಗವನ್ನು ಮೇಲ್ಮುಖವಾಗಿ ಇಟ್ಟುಕೊಳ್ಳಿ. ಬಟ್ಟೆಯ ಮೇಲ್ಭಾಗವು ಹೊಲಿಗೆಸಾಲಿಗೆ ಸರಿಯಾಗಿ ಬರುವಂತೆ ಬಟ್ಟೆಯನ್ನು ಮಡಚಿ. ಈಗ ಉಳಿದಿರುವ ಕೆಲಸ ಎಂದರೆ ಓಪನ್ ಬದಿಗಳನ್ನು ಹೊಲಿದು ತೂಗುದಾರವನ್ನು ಜೋಡಿಸುವುದು. ನಿಮ್ಮ ಕೆಲಸವು ಬೇಗ ಮತ್ತು ಸುಲಭವಾಗಿ ಆಗಬೇಕೆಂದಿದ್ದರೆ ರಿಬ್ಬನ್ ಬಳಸಬಹುದು ಅಥವಾ ನೀವೇ ಪಟ್ಟಿಯನ್ನು ಮಾಡಿಕೊಳ್ಳಬಹುದು.

ರಿಬ್ಬನ್ನಿನ ಒಂದು ತುದಿಯನ್ನು ತೆಗೆದುಕೊಂಡು ಅಂಚುಗಳ ಮೇಲ್ಭಾಗದ ನಡುವೆ ಇರಿಸಿ. ಅಂಚನ್ನು ಪ್ರೆಷರ್ ಫುಟ್ ಬುಡದಲ್ಲಿ ಸರಿಯಾಗಿ ಹೊಂದಿಸಿಟ್ಟು, ಪ್ರೆಷರ್ ಫುಟ್‌ನ್ನು ಕೆಳಕ್ಕೆ ಮಾಡಿ. ಅಂಚಿನ ಬದಿಯಲ್ಲಿ ಹೊಲಿಯಲು ಪ್ರಾರಂಭಿಸಿ ಮತ್ತು ಹಿಮ್ಮುಖವಾಗಿ ಹೊಲಿಗೆ ಹಾಕಿ, ಹೊಲಿಗೆಯನ್ನು ಭದ್ರಪಡಿಸಿ.







ಅಂಚಿನ ಬಳಿ ಹೊಲಿಯುವಾಗ ಗಮನವಿರಲಿ. ಕೊನೆಯುವರೆಗೂ ಹೊಲಿಗೆ ಮುಂದುವರಿಸಿ. ಕೊನೆಯನ್ನು ತಲುಪಿದಾಗ ಹಿಮ್ಮುಖವಾಗಿ ಹೊಲಿದು, ಹೊಲಿಗೆಯನ್ನು ಲಾಕ್ ಮಾಡಿ.

ರಿಬ್ಬನ್ ತೆಗೆದುಕೊಳ್ಳಿ ಮತ್ತು ಟ್ವಿಸ್ಟ್‌ಗಳನ್ನು ತೆಗೆಯಿರಿ. ರಿಬ್ಬನ್ನಿನ ಇನ್ನೊಂದು ತುದಿಯನ್ನು ಬಟ್ಟೆಯ ಓಪನ್ ಇರುವ ಮತ್ತೊಂದು ಭಾಗದಲ್ಲಿ ಸೇರಿಸಿ. ಈ ಹಿಂದೆ ಮಾಡಿದಂತೆಯೇ ಈ ಭಾಗದಲ್ಲಿಯೂ ಪುನರಾವರ್ತಿಸಿ. ಅಂಚಿನ ಉದ್ದಕ್ಕೂ ಹೊಲಿಯಿರಿ. ಅಂಚುಗಳನ್ನು ಅಚ್ಚುಕಟ್ಟಾಗಿ ಹೊಲಿದಿದ್ದೀರಿ ಎಂಬುದನ್ನು ಖಚಿತಪಡಿಸಿಕೊಂಡು ಕೊನೆಯನ್ನು ತಲುಪಿದಾಗ ಹಿಮ್ಮುಖ ಹೊಲಿಗೆ ಹಾಕಿ.

ಹೊಲಿಗೆ ಯಂತ್ರವನ್ನು ನಿಲ್ಲಿಸಿ. ಬಟ್ಟೆಯನ್ನು ಹೊರಕ್ಕೆ ತೆಗೆಯಲು ಪ್ರೆಷರ್ ಫುಟ್ ಮೇಲಕ್ಕೆತ್ತಿ. ದಾರಗಳನ್ನು ಎಳೆದು ಹೆಚ್ಚುವರಿ ದಾರಗಳನ್ನು ಕತ್ತರಿಸಿ.

ನಿಮ್ಮ ಮೊದಲ ಪೌಚ್ ಈಗ ಸಿದ್ಧವಾಗಿದೆ. ನೀವು ವೆಲ್ಕ್ರೋ ಜೋಡಿಸಿದ ಭಾಗದಲ್ಲಿ ಹೊಲಿಗೆ ಸಾಲುಗಳು ಕಾಣದಂತೆ ಮಾಡಬೇಕೆಂದು ಬಯಸಿದರೆ, ಅದನ್ನು ಸುಲಭವಾಗಿ ಮಾಡಬಹುದು. ಒಂದು ಅಲಂಕೃತವಾದ ಹೂವು ಅಥವಾ ಸುಂದರವಾದ ಬಟನ್ ಇದ್ದರೆ ಸಾಕು. ಸ್ಥಳೀಯ ಅಂಗಡಿಗಳಲ್ಲಿ ಒಂದು ಹೂವು ತಂದು ಅದನ್ನು ಹೊಲಿಗೆಯ ಮೇಲೆ ಇಡಿ. ಬಟ್ಟೆ ಅಂಟು ತೆಗೆದುಕೊಂಡು ಅದರ ಸುತ್ತಲೂ ಚುಕ್ಕೆ ಚುಕ್ಕೆಯಾಗಿ ಇಟ್ಟು ಅಲಂಕೃತ ವಸ್ತುಗಳನ್ನು ಬಟ್ಟೆಯ ಮೇಲೆ ಅಂಟಿಸಿ.

ಇಲ್ಲಿ ನೋಡಿ, ನಿಮ್ಮ ಮೊಬೈಲ್ ಪೌಚ್ ಈಗ ರೆಡಿಯಾಗಿದೆ.

ಇದೇ ರೀತಿ ಹಲವು ಬಣ್ಣಗಳು, ಬಟ್ಟೆಗಳು ಮತ್ತು ಅಲಂಕೃತ ವಸ್ತುಗಳನ್ನು ಬಳಸಿ ಮಾಡಬಹುದು. ಅವುಗಳನ್ನು ಮಾಡುವ ರೀತಿ ಮಾತ್ರ ಒಂದೇ. ಮಾಡಿದ ನಂತರ ಪೌಚ್ ನೇತು ಹಾಕಿಕೊಂಡು ನಮಗೆಲ್ಲರಿಗೂ ತೋರಿಸಿ.